# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ಇತ್ತೀಚೆಗೆ ಬೆಂಗಳೂರಿನ ಚನ್ನೇನಹಳ್ಳಿಯಲ್ಲಿ ನಡೆದ "ಸ್ವರ ಭಾರತಂ" ಘೋಷ್ ವಾದನ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮೋಹನ್‌ಭಾಗವತ್‌ರವರು ಭಾಗವಹಿಸಿದ್ದರು.


ಸಂಪುಟ : 43 | ಸಂಚಿಕೆ : 12 | ಪ್ಲವ – ಪುಷ್ಯ | ಕಲಿಯುಗಾಬ್ದ 5123 | 01–02–2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಸರಕಾರ ದೇವಸ್ಥಾನದ ಆಡಳಿತದಿಂದ ಹಿಂದೆ ಸರಿಯಲಿ!

ಭಾರತದ ಇತಿಹಾಸದಲ್ಲಿ ದೇವಸ್ಥಾನಗಳಿಗೆ ಬಹಳ ಪ್ರಾಮುಖ್ಯತೆ ಇದೆ ಹಾಗು ಧಾರ್ಮಿಕವಾಗಿ ಬಹಳ ಮಹತ್ವ ನೀಡುತ್ತಾ ಬಂದಿದ್ದು, ಈ ನೆಲವನ್ನು ಆಳಿದ ರಾಜ ಮಹಾರಾಜರು ಸಹ ದೇವಸ್ಥಾನಗಳಿಗೆ ಇನಾಂ ನೀಡುತ್ತಿದ್ದ ಪದ್ದತಿಯನ್ನೂ ಸಹ ಕಂಡಿದ್ದೇವೆ.

ಈ ದೇಶದ ಮೇಲೆ ದಬ್ಬಾಳಿಕೆ ಮಾಡಿ ಆಳ್ವಿಕೆ ಮಾಡಿದ ಬ್ರಿಟೀಷರು ಸಹ ಅನೇಕ ದೇವಸ್ಥಾನಗಳು, ಧಾರ್ಮಿಕ ಆಚರಣೆಗಳಿಗೆ ಗೌರವ ನೀಡುತ್ತಿದ್ದರು, ಅದು ಕೋಲೋನಿಯಲ್ ಮಾನಸಿಕತೆಯ ಆಚೆಗೆ ಇದ್ದರೂ, ಅವರ ಧಾರ್ಮಿಕ ಕೇಂದ್ರವಾದ ಚರ್ಚು ಮತ್ತು ದೇವಸ್ಥಾನಗಳನ್ನು ಸಮೀಕರಿಸಿಕೊಂಡು ರಾಜ್ಯಾಡಳಿತದ ಭಾಗವನ್ನಾಗಿಸಿದರು.ಅಲ್ಲದೆ ಈ ಕುರಿತಾಗಿ ಇಲಾಖೆ, ಕಾನೂನು, ಕಟ್ಟಳೆಗಳನ್ನೂ ರೂಪಿಸಿದರು. ಅಲ್ಲದೆ ಹಿಂದೆಲ್ಲಾ ಗ್ರಾಮಾಡಳಿತದ ಭಾಗವಾಗಿದ್ದ ದೇವಸ್ಥಾನಗಳನ್ನು ಅಧಿಕಾರವನ್ನು ಆಡಳಿತದ ದೃಷ್ಟಿಯಿಂದ ಕೇಂದ್ರೀಕರಣಗೊಳಿಸುವ ಸಲುವಾಗಿ ಬ್ರಿಟೀಷರು ತಮ್ಮ ತೆಕ್ಕೆಗೇ ತೆಗೆದುಕೊಂಡರು.

ಆದರೆ ಭಾರತದಲ್ಲಿ ದೇವಸ್ಥಾನ ಎನ್ನುವುದು ಕೇವಲ ಪೂಜಾ ಸ್ಥಳವಲ್ಲ. ನಮ್ಮ ದೇವರು ಅಂದರೆ ಬ್ರಿಟೀಷರು ಅಥವಾ ಪಾಶ್ಚಿಮಾತ್ಯರು ನಂಬುವಂತಹ ಗಾಡ್ ಎನ್ನುವ ಕಲ್ಪನೆಯಲ್ಲ ಅನ್ನುವ ಸೆಮೆಟಿಕ್ ಮಾನಸಿಕತೆಯಿಂದ ಆಡಳಿತದಲ್ಲಿದ್ದ ಬ್ರಿಟೀಷರಿಗೆ ಅರ್ಥವಾಗಲಿಲ್ಲ. ವರ್ಣ ವ್ಯವಸ್ಥೆಯನ್ನು ಅವರಲ್ಲಿನ ಗಿಲ್ಡ್ ಸಿಸ್ಟಮ್‌ಗೆ ನಮ್ಮ ದೇವಸ್ಥಾನವನ್ನು ಚರ್ಚುಗಳಿಗೆ, ಅವರ ಪ್ರೀಸ್ಟ್‌ಅನ್ನು ಪುರೋಹಿತರಿಗೆ ಹೋಲಿಸಿಕೊಂಡು ಸಮಾಜದ ಅನೇಕ ಸೂಕ್ಷ್ಮ ಕೊಂಡಿಗಳನ್ನು ತಲೆಮಾರುಗಳ ಉದ್ದಕ್ಕೂ ನಾಶ ಮಾಡುತ್ತಾ ಬಂದದ್ದು ದೌರ್ಭಾಗ್ಯ.

ಭಾರತಕ್ಕೆ ಸ್ವಾತಂತ್ರ್ಯ ಬಂದು 75 ಸಂವತ್ಸರಗಳು ತುಂಬುತ್ತಿರುವಾಗ ಕರ್ನಾಟಕ ರಾಜ್ಯದ ಸರ್ಕಾರವು ಒಂದು ಒಳ್ಳೆಯ ನಿರ್ಧಾರ ತೆಗೆದುಕೊಂಡು ಸರ್ಕಾರದ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ದೇವಸ್ಥಾನಗಳನ್ನು ಖಾಸಗೀಕರಣ ಮಾಡಿ, ಅದರ ಪಾರುಪತ್ಯೆಯನ್ನು ಹಿಂದು ದೇವಸ್ಥಾನಗಳ ಆಡಳಿತ ಮಂಡಳಿಗಳೇ ಸ್ವತಂತ್ರವಾಗಿ ನಿರ್ವಾಹಣೆ ಮಾಡಲು ಅಧಿಕಾರ ನೀಡುತ್ತೇವೆ ಎಂದು ಹೇಳಿರುವುದು ನಿಜಕ್ಕೂ ಸ್ವಾಗತರ್ಹ.

ಈ ನಡೆ ನಿಜಕ್ಕೂ ಅನುಕರಣೀಯ, ಏಕೆಂದರೆ ಈವರೆಗೂ ಸರಕಾರಗಳು ಬಹುಮುಖ್ಯವಾಗಿ ಅಭಿವೃದ್ಧಿಗೆಂದು ಮುಜರಾಯಿ ಇಲಾಖೆಯು ಹಿಂದೂಗಳ ದೇವಸ್ಥಾನದ ಹುಂಡಿಯಿಂದ ಬಂದ ಹಣವನ್ನು ಮಸೀದಿ/ಮದರಸ, ಚರ್ಚ್‌ಗಳ ಅಭಿವೃದ್ಧಿಗೆಂದು ಹಣವನ್ನು ವ್ಯಯ ಮಾಡುತ್ತಿದ್ದದ್ದು ನೋವಿನ ಸಂಗತಿ. ಇದಕ್ಕೆ ವಿರೋಧ ವ್ಯಕ್ತಿ ಪಡಿಸಿದ್ದರೂ ಸಹ ಯಾವುದೇ ಪ್ರಯೋಜನವಾಗಿರುತ್ತಿರಲಿಲ್ಲ, ಅದರ ಮೇಲೆ ದೇವಸ್ಥಾನದ ಹಣವನ್ನು ದೇವಸ್ಥಾನಕ್ಕೆ ಮಾತ್ರ ಉಪಯೋಗಿಸಿ ಎಂದರೆ ಕೋಮುವಾದಿಗಳು, ಅಸಹಿಷ್ಣುಗಳು, ಸಮಾಜದ ಸಾಮರಸ್ಯವನ್ನು ಹಾಳು ಮಾಡುತ್ತಿದ್ದಾರೆ, ಅಲ್ಪಸಂಖ್ಯಾತರಿಗೆ ತಾರತಮ್ಯ ಎಂದೆಲ್ಲಾ ಕೂಗುಮಾರಿಗಳು ಏಳುತ್ತಿದ್ದವು. ಆದರೆ ರಾಜ್ಯದಲ್ಲಿ ಅನೇಕ ದೇವಸ್ಥಾನಗಳು ಆರ್ಥಿಕವಾಗಿ ಸಧೃಡವಾಗಿರುವುದು ಮತ್ತು ಆದಾಯಗಳೂ ಬಹಳ ಗಮನಾರ್ಹವಾಗಿದೆ, ಆದರೆ ಹಾಗೆ ಬಂದ ಆದಾಯ ಅಲ್ಲಿನ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಾಗದೆ ಮಸೀದಿಯ ಮಿನರ್‌ಗಳಿಗೆ, ಚರ್ಚ್‌ನ ಶಿಲುಬೆಗಳು ಚಂದ್ರನ ಆಕೃತಿ ಆಕಾಶದೆತ್ತರಕ್ಕೆ ಚಿನ್ನದ ಲೇಪನದಿಂದ ಕಂಗೊಳಿಸುತ್ತಿದ್ದದ್ದು ನಿಜಕ್ಕೂ ಅನ್ಯಾಯ. ಹಿಂದೂ ದೇವಸ್ಥಾನಗಳ ಛಾವಣಿ ಮುರಿದು ಬೀಳುವಂತಿಹದ್ದನ್ನು ಕಣ್ಣಾರೆ ಕಂಡಾಗ ಮನಸ್ಸಿಗೆ ನೋವುಂಟಾಗುತ್ತಿತ್ತು.

ಹಜ್ ಯಾತ್ರೆಗೆ ಹೋಗುವವನು ಸ್ವಂತ ಹಣವನ್ನು ಕ್ರೂಢೀಕರಿಸಿ ಹೋಗಬೇಕೆಂಬ ನಿಷ್ಟೆಯನ್ನು ಮುರಿದು, ಹಿಂದೂ ದೇವಾಲಯಗಳ ಹುಂಡಿಯಿಂದ ಬಂದ ಹಣದಿಂದ ಕುರಿಯನ್ನು ಮೆಕ್ಕದಲ್ಲಿ ಖರೀದಿಸಲು ಆಸಕ್ತಿ ತೋರಿಸಿದರು ಎಂಬುದೆ ವಿಪರ್ಯಾಸ.

ಕರ್ನಾಟಕ ರಾಜ್ಯಾದ್ಯಾಂತ 34,558 ಮಜರಾಯಿ ಇಲಾಖೆ ದೇವಸ್ಥಾನಗಳು ಸರ್ಕಾರದ ಹಿಡಿತದಲ್ಲಿ ಇದ್ದು, ಇದರಲ್ಲಿ ಅಭಿವೃದ್ಧಿ ಕಾಣದೆ ಎಷ್ಟೋ ದೇವಸ್ಥಾನಗಳು ಇವೆ ಎಂಬುದು ಉಲ್ಲೇಖಿತ ವಿಷಯವಾಗಿದೆ.ಎಷ್ಟೋ ದೇವಸ್ಥಾನಗಳು ಸುಣ್ಣ ಬಣ್ಣ ಕಾದೆ ವರ್ಷಗಳಾಗಿವೆ, ಕೆಲವು ದೇವಸ್ಥಾನಗಳ ಛಾವಣಿ ಸೋರಿ, ದೇವಸ್ಥಾನದೊಳಗೆ ಮಳೆನೀರುವ ಬರುವ ಪರಿಸ್ಥಿತಿಯಿದೆ, ದೇವಸ್ಥಾನದ ಸುತ್ತಮುತ್ತ ಪಾರ್ಥೇನಿಯಂ ಕೂಡ ಬೆಳೆದು ನಿಂತಿದೆ ಹೀಗಿರುವಾಗ ಇದೆಲ್ಲವನ್ನು ಬಿಟ್ಟು ಮಸೀದಿಗೆ/ಚರ್ಚುಗಳಿಗೆ ವಿನಿಯೋಗಿಸಬೇಕಾದ ಅವಶ್ಯಕತೆಯೇನಿದೆ?

ಈ ದೇವಸ್ಥಾನಗಳಲ್ಲಿ ಒಂದೊಂದು ದೇವಸ್ಥಾಗಳಿಗೂ ಒಂದೊಂದು ಇತಿಹಾಸ ಇದೆ. ಒಂದು ಪಾರಂಪರಿಕ ಹಿನ್ನೆಲೆ ಇದೆ. ಹಿಂದೂ ಪ್ರತಿತಿಗಳು ಇವೆ. ಅವುಗಳನ್ನು ಗೌರವಿಸುವಂತಹದ್ದು ಆಗಬೇಕು ಹಾಗಾಗಿ ಸಂಪ್ರದಾಯಗಳು ಈ ಮುಜರಾಯಿ ಇಲಾಖೆ ಹಿಡಿತದಲ್ಲಿ ಇದ್ದರೆ ಸಿಗುವುದಿಲ್ಲ. ಆ ಗೌರವ ಪರಂಪರೆ ಮತ್ತು ಸಾಂಪ್ರದಾಯಿಕ ಆಚರಣೆಗಳನ್ನು ಮಾಡಲು ಶ್ರದ್ಧೆಯನ್ನು ಕಾಪಾಡಲು ಮತ್ತು ಊರಿನ ಗ್ರಾಮದೇವತೆ/ಅಧಿದೇವತೆಯ ಪೂಜೆಯಿಂದ ಗ್ರಾಮದ ಸುಭಿಕ್ಷೆ ಎಂಬ ಪ್ರತೀತಿಯನ್ನು ಕಾಪಾಡಲು ದೇವಾಲಯಗಳಲ್ಲಿ ಹಿಂದೂ ಮತ್ತು ಗ್ರಾಮ ಸಮಿತಿ ಇರಬೇಕು ಎಂಬುದು ಸಾರ್ವಜನಿಕರ ಆಶಯ.

ಹುಂಡಿಯಲ್ಲಿ ಬರುವ ಕಾಣಿಕೆಯಿಂದ ಮುಜರಾಯಿ ದೇವಸ್ಥಾನಗಳನ್ನು ಈ ರೀತಿಯಾಗಿ ವಿಂಗಡಿಸಿರುವುದು. ಎ.ಗ್ರೇಡ್, ಬಿ.ಗ್ರೇಡ್, ಸಿ.ಗ್ರೇಡ್. ಬಿ ಮತ್ತು ಸಿ ಗ್ರೇಡ್ ದೇವಸ್ಥಾನಗಳೇ ಹೆಚ್ಚಿದ್ದು, ಈ ದೇವಸ್ಥಾನಗಳಿಂದ ಬರುವ ಹುಂಡಿ ಹಣವನ್ನು ತಾಲ್ಲೂಕು ಆಡಳಿತ ಯಾವುದೇ ಪಾರದರ್ಶಕತೆ ಇಲ್ಲದೆ ಹಣವನ್ನು ಜಮಾಬಂದಿ ಹೆಸರಿನಲ್ಲಿ ತೆಗೆದುಕೊಂಡು ಹೋಗಿ, ಯಾರಿಗೂ ಅಂದರೆ ಸ್ಥಳೀಯರಿಗೆ (ಗ್ರಾಮಸ್ಥರಿಗೆ ತಿಳಿಸದೆ ತೆಗೆದುಕೊಂಡು ಹೋಗುತ್ತಾರೆ. ಅದೇ ದೇವಸ್ಥಾನದ ಅಭಿವೃದ್ಧಿಗೆ ಹಣವನ್ನು ಬಿಡುಗಡೆ ಮಾಡುವಂತೆ ಮುಜರಾಯಿ ಇಲಾಖೆಗೆ ಹೋದರೆ ಅನುದಾನಕ್ಕೆ ಅನುಮೋದನೆ ನೀಡದೆ ಕೊನೆಗೆ ಮೇಲ್ಚಾವಣಿ ಪ್ಲಾಸ್ಟಿಕ್ ಟಾರ್ಪಲ್ ಹಾಕುವ ಸ್ಥಿತಿ ಉಂಟಾಗುತ್ತದೆ.

ಜೀವನದ ಕೊನೆಯಲ್ಲಿ ತೀರ್ಥಯಾತ್ರೆ ಮಾಡಿ ಸಾಯಬೇಕೆಂಬ ಆಸೆಯನ್ನು ತನ್ನಲ್ಲಿ ಹುದುಗಿಸಿಟ್ಟುಕೊಂಡೆ ಎಷ್ಟು ಜನ ಬಡ ಹಿಂದೂಗಳು ಯಾರೋ ತಂದ ಗಂಗಾ ಜಲವನ್ನು ಬಾಯಿಗೆ ಬಿಡಿಸಿಕೊಂಡು ಸಾಯುವುದನ್ನು ಸಹ ನೋಡಿದ್ದೇವೆ. ಈ ತೀರ್ಥಕ್ಷೇತ್ರದಿಂದ ವಂಚಿತವಾಗುವುದು, ಹಜ್‌ಯಾತ್ರೆಗೆ ಹೋಗುವ ಮುಸ್ಲಿಂ ಯಾತ್ರಿಕರಿಗೆ ಮುಜರಾಯಿ ಇಲಾಖೆಯು ದೇವಸ್ಥಾನದಿಂದ ಹೋಗುವ ಹಣವನ್ನು ದೇವಸ್ಥಾನಗಳಿಗೆಂದೇ ಖರ್ಚು ಮಾಡಬಹುದು, ಎಷ್ಟೋ ಮುಜರಾಯಿ ಇಲಾಖೆ ದೇವಸ್ಥಾನಗಳಿಗೆ ಮೂಲ ಸೌರ್ಕರ್ಯ ನೀಡಿ ದೇವಸ್ಥಾನದ ಜೀರ್ಣೋದ್ಧಾರ ಮತ್ತು 12 ವರ್ಷಕ್ಕೊಮ್ಮೆ ಮಾಡುವ ಬ್ರಹ್ಮ ಕಳಶೋತ್ಸವ ನಡೆಯದೆ ಶಿಥಿಲ ವ್ಯವಸ್ಥೆಗೊಂಡು, ಪೂಜೆ ಪುನಸ್ಕಾರಗಳು ಇಲ್ಲದೆ ದೇವಸ್ಥಾನಗಳ ಹಾಳು ಬಿದ್ದಿದೆ.


ದೇವಸ್ಥಾನಗಳು ಸರ್ಕಾರದ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿದ್ದು, ಈ ದೇವಸ್ಥಾನಗಳ ಹುಂಡಿ ಹಣವನ್ನು ಸಂಗ್ರಹಿಸುವುದರಲ್ಲಿ ಇರುವ ಕಾಳಜಿ ದೇವಸ್ಥಾನದ ಅಭಿವೃದ್ಧಿ ಕಾರ್ಯಕ್ಕೆ ಇಲ್ಲ ಎಂಬುದೆ ಇಲ್ಲಿ ನೋವಿನ ಸಂಗತಿಯಾಗಿದೆ.

ತಿರುಪತಿ ತಿಮ್ಮಪ್ಪನ ಹುಂಡಿಗೆ ವಾರ್ಷಿಕ 1300 ಕೋಟಿ, ಪ್ರತಿ ವರ್ಷ ವೈಷ್ಣೋ ದೇವಿ ದೇವಸ್ಥಾನದಿಂದ 520 ಕೋಟಿ ಹಣ ಸಂಗ್ರಹವಾಗುತ್ತದೆ. ಈ ಎರಡು ದೇವಸ್ಥಾನಗಳಲ್ಲಿ ಭಕ್ತರು ಹಾಕುವ ಹಣ ಎಲ್ಲಿಗೆ ಹೋಗುತ್ತದೆ ಎಂದು ನೋಡಿದರೆ ತಿರುಪತಿ ತಿಮ್ಮಪ್ಪನ ಸನ್ನಿಧಾನಕ್ಕೆ ಬರುವ ಹಣ ಕ್ರಿಶ್ಚಿಯನ್ ಮತಾಂತರ ಚಟುವಟಿಕೆ ಮತ್ತು ವೈಷ್ಣೋದೇವಿ ಮಂದಿರದ ಹಣ ಇಸ್ಲಾಂ ಭಯೋದ್ವಾದನೆಗೆ ನೇರವಾಗಿ ಹೋಗುತ್ತಿರುವುದನ್ನು ತಡೆಯಬೇಕಿದೆ.

1965ನೇ ಇಸವಿಯಲ್ಲಿ ಜಸ್ಟಿಸ್ ರಾಮಜೋಯಿಸರು ನೀಡಿರುವ ವರದಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಪರಿಶೀಲಿಸಿ ಹಿಂದು ದೇವಾಲಯಗಳ ಹಣವನ್ನು ಹಿಂದು ಸಮಾಜಕ್ಕಾಗಿ ವ್ಯಯ ಮಾಡುವ ಹಿಂದೂ ದೇವಸ್ಥಾನಗಳು, ಮಠಗಳು ಮಂದಿರಗಳು, ಗುರುಕುಲ, ಗೋಶಾಲೆ ಅಭಿವೃದ್ಧಿಗೆ ನೀಡಿ ಪಾರದರ್ಶಕತೆಯಿಂದ ವಿಶೇಷ ಮಾನದಂಡಗಳೊಂದಿಗೆ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳಿಗೆ ಬಳಸಿದ್ದಲ್ಲಿ ದೇವಸ್ಥಾನಗಳ ಸರ್ಕಾರದ ಹಿಡಿತದಿಂದ ಬಿಟ್ಟಲ್ಲಿ ಅನುಕೂಲವಾಗುತ್ತದೆ.

* ಗ್ರಾಮ ಗ್ರಾಮಗಳಲ್ಲಿ ಇರುವ ಹಿಂದು ದೇವಸ್ಥಾನಗಳ ಅಭಿವೃದ್ಧಿ,
* ತಾಲ್ಲೂಕಿನಲ್ಲಿ ನಡೆಯುವ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳಿಗೆ ಸಹಾಯಾನುದಾನ ನೀಡುವುದು
* ಸಂಸ್ಕೃತ ಶಾಲೆಗಳ ಅಭಿವೃದ್ಧಿ ಮತ್ತು "ಉಚಿತ ವ್ಯಾಸಾಂಗಕ್ಕೆ" ಪ್ರೋತ್ಸಾಹ
* ತಾಲ್ಲೂಕಿನಿಂದ ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗಳನ್ನು ಆಯ್ಕೆ ಮಾಡಿ ಸಹಾಯಧನ ನೀಡಿ, ಪುಣ್ಯ ಕ್ಷೇತ್ರಗಳ ಯಾತ್ರೆಗೆ ಕಳುಹಿಸಿ ಕೊಡುವುದು. (ಒಂದು ತಾಲ್ಲೂಕಿನ 01 ವರ್ಷಕ್ಕೆ 20 ಜನಕ್ಕೆ)
* ಗೋಶಾಲೆಗೆ ಆರ್ಥಿಕ ನೆರವು ನೀಡುವುದು
* ದೇವಸ್ಥಾನ ಅರ್ಚಕರಿಗೆ ಮತ್ತು ಕುಟುಂಬದ ವೈದ್ಯಕೀಯ ಚಿಕಿತ್ಸೆಗೆ ಧನ ಸಹಾಯ
* ಅರ್ಚಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಧನ
* ಶಾಲೆಗಳಿಗೆ ಮಧ್ಯಾಹ್ನದ ಬಿಸಿ ಊಟ ನೀಡುವುದು, ತಾಲ್ಲೂಕಿನ ಒಂದು ಶಾಲೆ
* ನಗರದ ಪ್ರಮುಖ ದೇವಾಲಯದಲ್ಲಿ ಪ್ರತಿನಿತ್ಯ ಪ್ರಸಾದ ವ್ಯವಸ್ಥೆ ಮಾಡುವುದು.
* ದೇವಸ್ಥಾನ ಹಾಗೂ ಧಾರ್ಮಿಕ ಕೆಲಸಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಇಲಾಖೆ ಜಿಲ್ಲಾ ಕೇಂದ್ರದಲ್ಲಿ ತೆರೆಯುವುದು

ಒಟ್ಟಾರೆ ದೇವಸ್ಥಾನಗಳನ್ನು ಸರಕಾರದ ಕಬಂಧಬಾಹುಗಳಿಂದ ಹೊರತಂದರೆ ನಿಜಕ್ಕೂ ಅನುಕೂಲವಾಗುತ್ತದೆ. ಹಿಂದೂ ಸಮಾಜವು ತನ್ನ ಧಾರ್ಮಿಕ ಶ್ರದ್ಧಾ ಕೇಂದ್ರಗಳನ್ನು ತಾನೇ ನಿರ್ವಹಿಸುವಷ್ಟು ಸಬಲವಾಗಿಯೂ, ಪ್ರಬಲವಾಗಿಯೂ ಇದೆ. ಇದರಿಂದ ದೇವಾಲಯಗಳು ಮತ್ತೆ ಸಮಾಜಮುಖಿಯಾಗಲಿದೆ.



**– ರಘು ಸಕಲೇಶಪುರ**
ಪ್ರಾಂತ ಸಂಯೋಜಕರು, ಬಜರಂಗದಳ, ಕರ್ನಾಟಕ ದಕ್ಷಿಣ

## ಸಂಸ್ಮರಣೆ

# ಪ್ರೊ. ಮೈಸೂರು ಹಿರಿಯಣ್ಣ (7 ಮೇ 1871 – 19 ಸೆಪ್ಟೆಂಬರ್ 1950)

ಪ್ರೊ. ಮೈಸೂರು ಹಿರಿಯಣ್ಣನವರು ಭಾರತೀಯ ತತ್ವಶಾಸ್ತ್ರಲೋಕದ ಹಿರಿಮೆ ಎಂದು ಪರಿಗಣಿತರಾದ ಮಹಾನ್ ವಿದ್ವಾಂಸರು.

ಸುಪ್ರಸಿದ್ಧ ವಿದ್ವಾಂಸರೂ, ತತ್ವಜ್ಞಾನಿಗಳೂ ಆದ ಹಿರಿಯಣ್ಣನವರು 1871ರ ಮೇ 7ರಂದು ಮೈಸೂರಿನಲ್ಲಿ ಜನಿಸಿದರು. ಅವರ ಪ್ರಾಥಮಿಕ ವಿದ್ಯಾಭ್ಯಾಸ ಮೈಸೂರಿನಲ್ಲಿ ನೆರವೇರಿತು. ಮುಂದೆ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಮತ್ತು ಎಂ.ಎ. ಪದವಿ ಗಳಿಸಿದ ಹಿರಿಯಣ್ಣನವರು, ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಲೈಬ್ರರಿಯನ್ ಆಗಿ ತಮ್ಮ ಉದ್ಯೋಗವನ್ನು ಪ್ರಾರಂಭಿಸಿದರು.



ಹಿರಿಯಣ್ಣನವರು ಕೆಲಕಾಲ ಸರ್ಕಾರಿ ಕಚೇರಿಯಲ್ಲಿ ಗುಮಾಸ್ತರ ಕೆಲಸ ನಿರ್ವಹಿಸಿದ ನಂತರ ಮದರಾಸಿನ ಸೈದಾ ಪೇಟೆಯ ಟೀಚರ್ಸ್ ಕಾಲೇಜಿನಲ್ಲಿ ಎಲ್.ಟಿ. ಪದವಿ ಪಡೆದು, ಮೈಸೂರಿನ ಗೌವರ್ನಮೆಂಟ್ ನಾರ್ಮಲ್ ಸ್ಕೂಲಿನಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿ, ಆನಂತರ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಪಡೆದರು. ಕನ್ನಡದ ಪ್ರಚಾರ, ಅಭಿವೃದ್ಧಿಗಳಿಗಾಗಿ ಶ್ರಮಿಸುತ್ತಿದ್ದ ಪ್ರಮುಖರಲ್ಲಿ ಹಿರಿಯಣ್ಣನವರೂ ಒಬ್ಬರು. ಕನ್ನಡ ಶಿಕ್ಷಣದ ಬೋಧನೆಯ ಬಗೆಗೆ ಗ್ರಂಥವೊಂದನ್ನು ಸಹಾ ಅವರು ರಚಿಸಿದ್ದರು.

ಹಿರಿಯಣ್ಣನವರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಸಂಸ್ಕೃತ ಭಾಷಾ ಸಾಹಿತ್ಯವನ್ನಲ್ಲದೆ, ಭಾರತೀಯ ತತ್ವಶಾಸ್ತ್ರದ ಬೋಧನೆಯನ್ನೂ ನಿರ್ವಹಿಸುತ್ತಿದ್ದರು. ಭಾರತೀಯ ತತ್ವಶಾಸ್ತ್ರದ ಬಗ್ಗೆ ಅವರದ್ದು ಆಳವಾದ ಪಾಂಡಿತ್ಯ. ಅವರು ಮಹಾನ್ ವ್ಯಾಖ್ಯಾನಕಾರರೂ ಆಗಿದ್ದರು. ಡಾ.ಎಸ್.ರಾಧಾಕೃಷ್ಣನ್ ಮುಂತಾದ ಮಹಾನ್ ವ್ಯಕ್ತಿಗಳೊಡನೆ ನಿಕಟ ಸಂಪರ್ಕ ಹೊಂದಿದ್ದ ಹಿರಿಯಣ್ಣನವರು, ತತ್ವಶಾಸ್ತ್ರದ ಜಿಜ್ಞಾಸೆಯೆಡೆಗಿನ ತಮ್ಮ ಅಧ್ಯಯನ, ಅಧ್ಯಪನವನ್ನು ನಿರಂತರವಾಗಿ ರೂಢಿಸಿಕೊಂಡಿದ್ದರಲ್ಲದೆ, ತತ್ವಶಾಸ್ತ್ರದ ಆಧಾರದ ಮೇಲೆ ಹಲವಾರು ಗ್ರಂಥಗಳ ರಚನೆ ಮಾಡಿದ್ದರು.

ಔಟ್‌ಲೈನ್ಸ್ ಆಫ್ ಇಂಡಿಯನ್ ಫಿಲಾಸಫಿ, ದಿ ಎಸೆನ್‌ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ, ಪಾಪ್ಯುಲರ್ ಎಸ್ಸೇಸ್ ಇನ್ ಇಂಡಿಯನ್ ಫಿಲಾಸಫಿ, ದಿ ಕ್ವೆಸ್ಟ್ ಆಫ್ಟರ್ ಫರ್‌ಫೆಕ್ಷನ್, ಆರ್ಟ್ ಎಕ್ಸ್‌ಪೀರಿಯನ್ಸ್, ಸಂಸ್ಕೃತ ಸ್ಟಡೀಸ್, ಇಂಡಿಯನ್ ಫಿಲಾಸಫಿಕಲ್ ಸ್ಟಡೀಸ್, ದಿ ಮಿಷನ್ ಆಫ್ ಫಿಲಾಸಫಿ ಮುಂತಾದ ಅವರ ಗ್ರಂಥಗಳಲ್ಲಿ ಭಾರತೀಯ ತತ್ವಶಾಸ್ತ್ರದ ಬೆಳವಣಿಗೆ, ಸಿದ್ಧಾಂತಗಳ ಬಗ್ಗೆ ಆಳವಾದ ಒಳನೋಟಗಳು ಮತ್ತು ಹೃದಯಂಗಮ ನಿರೂಪಣೆಯಿದೆ. ಇದಲ್ಲದೆ ಈಶಾವ್ಯಾಸೋಪನಿಷತ್, ಕೇನೋಪನಿಷತ್, ಕಾಠಕೋಪನಿಷತ್, ಬೃಹದಾರಣ್ಯಕೋಪನಿಷತ್ ಮುಂತಾದವುಗಳನ್ನು ಹಿರಿಯಣ್ಣನವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ನೈಷ್ಕರ್ಮ ಸಿದ್ಧಿ(ಸುರೇಶಾಚಾರ್ಯ), ವೇದಾಂತಸಾರ(ಸದಾನಂದ), ಇಷ್ಟಸಿದ್ಧಿ ಇವು ಸಂಪಾದಿತ ಗ್ರಂಥಗಳು. ಇವಲ್ಲದೆ ಏಷಿಯಾಟಿಕ್ ಸೊಸೈಟಿ (ಲಂಡನ್), ಮಿಥಿಕ್ ಸೊಸೈಟಿ ಬೆಂಗಳೂರು, ಮದರಾಸಿನ ಫಿಲಸಾಫಿಕಲ್ ಮ್ಯಾಗಜಿನ್ ಮುಂತಾದ ಪತ್ರಿಕೆಗಳಲ್ಲಿ ಅವರು ನೂರಾರು ಲೇಖನಗಳನ್ನು ಬರೆದಿದ್ದರು. ಭಾರತೀಯ ತತ್ವಜ್ಞಾನದ ಅಧ್ಯಯನ, ಅನುಷ್ಠಾನ, ಪರಿಶೀಲನೆ, ಪ್ರತಿಪಾದನೆಗಳು ಹಿರಿಯಣ್ಣನವರ ವಿಶಿಷ್ಟ ಕೊಡುಗೆಗಳು.

ಹಿರಿಯಣ್ಣನವರಿಗೆ ಹಲವಾರು ವಿದ್ವಾಂಸರ ಪರಿಷತ್ತು, ಸಮ್ಮೇಳನಗಳು ಅಧ್ಯಕ್ಷ ಪದವಿಯನ್ನು ಸಲ್ಲಿಸಿ, ಗೌರವ ತೋರಿ ಸನ್ಮಾನಿಸಿದ್ದವು. ಸಂಸ್ಕೃತ ಅಕಾಡಮಿಯಿಂದ 'ಸಂಸ್ಕೃತ ಸೇವಾಧುರೀಣ' ಎಂಬ ಪ್ರಶಂಸೆಯೂ ಸಂದಿತ್ತು.
ಪ್ರೊ. ಹಿರಿಯಣ್ಣನವರು ಆಂಗ್ಲ ಭಾಷೆಯಲ್ಲಿ ರಚಿಸಿದ ಗ್ರಂಥ (Essentials of Indian Philosophy) 'ಭಾರತೀಯ ತತ್ವಶಾಸ್ತ್ರದ ತಿರುಳು', ಸಮರ್ಥವಾಗಿ, ವಿದ್ವತ್ಪೂರ್ಣವಾಗಿ ಬರೆದ ಪುಸ್ತಕಗಳ ಸಾಲಿನಲ್ಲಿ ಎದ್ದು ಕಾಣುವ ಗ್ರಂಥವಾಗಿದೆ. ಅವರ ಪುಸ್ತಕ ಇಂದಿಗೂ ವಿಶ್ವದೆಲ್ಲೆಡೆಯ ಭಾರತೀಯ ತತ್ವಶಾಸ್ತ್ರದ ವಿದ್ಯಾರ್ಥಿಗಳಿಗೆ, ಪಠ್ಯ ಪುಸ್ತಕವಾಗಿದೆ. ಅವರ ಇಂಗ್ಲೀಷ್ ವ್ಯಾಖ್ಯಾನ, ಎಲ್ಲರ ಮೆಚ್ಚುಗೆಯನ್ನು ಗಳಿಸಿದೆ.

ಹಿರಿಯಣ್ಣನವರು ಅತ್ಯಂತ 'ಮೃದು–ಮಧುರಭಾಷಿ', ಹಾಗೂ 'ಸಮರ್ಥ ಚಿಂತಕರು'. 'ಭಾರತೀಯ ತತ್ವಶಾಸ್ತ್ರ'ವನ್ನು ಸರಿಯಾಗಿ ಅರ್ಥೈಸಿ ಹೇಳುವುದರಲ್ಲಿ ಎತ್ತಿದ ಕೈಯಾಗಿದ್ದ ಅವರು, 1950ರ ಸೆಪ್ಟೆಂಬರ್ 19ರಂದು ಈ ಲೋಕವನ್ನಗಲಿದರು. ಅವರ ನಿಧನಾನಂತರ ಅವರ ಅಭಿಮಾನಿಗಳು ಶತಮಾನೋತ್ಸವ ಸ್ಮರಣಾ ಗ್ರಂಥವನ್ನು (ಕಮೆಮೊರೇಷನ್ ವಾಲ್ಯೂಮ್) 1972ರಲ್ಲಿ ಪ್ರಕಟಿಸಿ ಗೌರವ ಸಲ್ಲಿಸಿದರು.

ಡಿವಿಜಿ ಅವರು ತಮ್ಮ ಹೃದಯಸಂಪನ್ನರು ಕೃತಿಯಲ್ಲಿ ಮೊಟ್ಟ ಮೊದಲಿಗೆ ಹೆಸರಿಸಿರುವುದು ಪ್ರೊ. ಹಿರಿಯಣ್ಣನವರನ್ನು. ಹಿರಿಯಣ್ಣನವರ ಕುರಿತಾಗಿ ಹೇಳುತ್ತಾ ಡಿವಿಜಿ ಅವರು: "ಹಿರಿಯಣ್ಣನವರು ಮಹಾನುಭಾವರು. ಅವರ ಸ್ಮರಣೆ ನನಗೆ ಸಂತೋಷವೂ ಹೌದು. ಸುಕೃತವೂ ಹೌದು". ಎಂದು ಸ್ಮರಿಸುತ್ತಾರೆ.

## ಎಲ್ಲೋ ಕೇಳಿದ ಕಥೆ

### ಶ್ರೀ ಕೃಷ್ಣನ ಒಂದು ಪ್ರಸಂಗ

ಒಮ್ಮೆ ಶ್ರೀ ಕೃಷ್ಣ ಪರಮಾತ್ಮ ಕಿರೀಟ ಹಾಗೂ ಒಡವೆಗಳನ್ನು ಹಾಕಿಕೊಂಡು ಕನ್ನಡಿ ಮುಂದೆ ಅಲಂಕರಿಸಿಕೊಳ್ಳುತ್ತಿದ್ದ. ಯಾವ ಕಿರೀಟ ಧರಿಸಿದರೆ ಉತ್ತಮ, ಯಾವ ಒಡವೆ ಆಕರ್ಷಕ ಎಂದು ಬದಲಿಸಿ ಬದಲಿಸಿ ನೋಡಿಕೊಳ್ಳುತ್ತಿದ್ದನು.

ಸಾರಥಿಯಾದ ದಾರುಕನು ರಥ ಹಾಗೂ ಕುದುರೆಯೊಂದಿಗೆ ತಯಾರಾಗಿ ನಿಂತು ಕಾಯುತ್ತಾ ಇದ್ದನು. ಕೃಷ್ಣ ಪರಮಾತ್ಮ ಯಾವಾಗಲೂ ಬೇಗ ಬರುವವನು ಇಂದೇಕೆ ತಡ ಎಂದು ಕುತೂಹಲದಿಂದ ಒಳಗೆ ಬಂದು ನೋಡಿದಾಗ, ಕೃಷ್ಣನ ಚಟುವಟಿಕೆ ಕಂಡು, "ಪರಮಾತ್ಮ ನಾವು ಎಲ್ಲಿಗೆ ಹೋಗಬೇಕು?" ಎಂದು ಕೇಳಿದನು. ಆಗ ಕೃಷ್ಣ ಹೇಳಿದ "ಇಂದು ನಾನು ದುರ್ಯೋಧನನ ಭೇಟಿಗೆ ಹೋಗಬೇಕಿದೆ" ಎಂದು ಉತ್ತರ ಬಂತು. ಆಶ್ಚರ್ಯಗೊಂಡ ಸಾರಥಿ ದಾರುಕನು, "ಕೃಷ್ಣಾ, ದುರ್ಯೋಧನನ ಭೇಟಿಗೆ ಇಷ್ಟೆಲ್ಲಾ ಬಾಹ್ಯ ಅಲಂಕಾರದ ಅವಶ್ಯಕತೆ ಏನು? ಕೆಲ ಸಮಯದ ಮುಂಚೆ ನಿನ್ನ ಪ್ರಿಯನಾದ ಮಧ್ಯಮ ಪಾಂಡವ ಅರ್ಜುನ ನಿನ್ನ ದರ್ಶನಕ್ಕೆ ಬಂದಾಗ ನೀನು ನಿನ್ನ ಸರಳ ವೇಶದಲ್ಲಿಯೇ ಇದ್ದೆ, ಏನಿದು ಪಕ್ಷಪಾತ?" ಎಂದು ಕೇಳಿದ.

ಕೃಷ್ಣ ಪರಮಾತ್ಮ ಸಾರಥಿ ಕಡೆ ತಿರುಗಿ ಮುಗುಳ್ನಗುತ್ತಾ, "ದುರ್ಯೋಧನನಿಗೆ ನನ್ನ ಒಳಗಿನ ಆಂತರ್ಯ ಏನೂ ಕಾಣುವುದಿಲ್ಲ. ಹೊರಗಿನ ಥಳಕು ಮಾತ್ರ ಅವನಿಗೆ ಆಕರ್ಷಣೀಯ. ಆದರೆ ಅರ್ಜುನ ಹಾಗಲ್ಲ." ಎಂದನು.

ಆಗ ದಾರುಕನು "ಕೃಷ್ಣಾ, ಅದನ್ನು ಒಪ್ಪಿದೆ. ಆದರೆ ದುರ್ಯೋಧನನೇ ನಿನ್ನ ಭೇಟಿಗೆ ಬರಬೇಕು, ಜಗದ್ವಂದ್ಯನಾದ ನೀನು ಅವನ ಭೇಟಿಗೆ ಹೋಗೋದು ಸರಿಯೇ?"ಎಂದು ಕೇಳಿದನು.

ಆಗ ಮುಂದುವರಿದ ಕೃಷ್ಣ ಪರಮಾತ್ಮ, "ಕತ್ತಲೆ ಯಾವಾಗಲೂ ಬೆಳಕಿನೆಡೆಗೆ ಬರುವುದಿಲ್ಲ. ಬೆಳಕು ಕತ್ತಲೆ ಇರುವ ಕಡೆಗೆ ಸಾಗಿ ಪ್ರಪಂಚವನ್ನು ಬೆಳಗಿಸುತ್ತದೆ", ಎಂದು ಮುಗುಳ್ನಕ್ಕು ಉತ್ತರಿಸಿದನು.

ಎಷ್ಟು ಮಾರ್ಮಿಕವಾಗಿದೆ ಕೃಷ್ಣನ ನುಡಿ. ಅತ್ಯಂತ ಸರಳವಾದರೂ, ಬಹಳ ಅರ್ಥಗರ್ಭಿತವಾದ ಪ್ರಸಂಗ.

## ಪುಸ್ತಕ ಪರಿಚಯ





ಪುಸ್ತಕದ ಹೆಸರು : ನವ ಜಾಗತಿಕ ವ್ಯವಸ್ಥೆ–ದೃಷ್ಟಿಕೋನಗಳು–ಆಖ್ಯಾನಗಳು
ಸಂಪಾದಕರು : ಪ್ರಶಾಂತ್ ವೈದ್ಯರಾಜ್
ಪ್ರಕಾಶಕರು : ವಿಶ್ವಸಂವಾದ ಕೇಂದ್ರ, ಬೆಂಗಳೂರು
ಬೆಲೆ : 325
ಪುಟಗಳು : 238+16

ಇಂದು ಜಗತ್ತಿನ ವ್ಯಾಪ್ತಿ ಸಣ್ಣದಾಗುತ್ತಿರುವ ಈ ಹೊತ್ತಿನಲ್ಲಿ, ಜಾಗತೀಕರಣದ ಮರು ವ್ಯಾಖ್ಯಾನ ಆಗಬೇಕು ಹಾಗೂ ಸುಸ್ಥಿರ ಅಭಿವೃದ್ಧಿ ಮಾದರಿಗಳು ಮತ್ತು ಸಾಮಾಜಿಕ ಮೌಲ್ಯಗಳ ಕುರಿತು ಚಿಂತನೆ ನಡೆಯಬೇಕು. ಈ ವಿಚಾರಗಳನ್ನು ಪೂರ್ವಾಗ್ರಹರಹಿತವಾಗಿ ನೋಡುವುದು ಬಹಳ ಮಹತ್ವದ ಸಂಗತಿ. ವ್ಯೂಹಾತ್ಮಕ ಬೆಳವಣಿಗೆಗಳು ಹಾಗೂ ವಿಶ್ವಾದ್ಯಂತ ಜನರ ಮೇಲೆ ಅದು ಬೀರಿದ ಪರಿಣಾಮದ ಆಧಾರದಲ್ಲಿ 2021ನೇ ವರ್ಷವು ಬಹಳ ಪ್ರಾಮುಖ್ಯತೆಯನ್ನು ಪಡೆಯಿತು. ನಾವು ಜೀವಿಸುವ ಪರಿಸರಕ್ಕೆ ಯಾವುದೇ ಸಂಬಂಧವಿಲ್ಲದ, ಅತ್ಯಂತ ದೂರದಲ್ಲಿ ಘಟಿಸಿದ ಘಟನೆಯೊಂದರ ಪರಿಣಾಮದಿಂದ ವಿಶ್ವದ ಯಾರೂ ಹೊರಗುಳಿಯಲು ಸಾಧ್ಯವೇ ಇಲ್ಲ ಎನ್ನುವುದನ್ನು ಈ ವರ್ಷ ಮನಗಾಣಿಸಿದೆ. ಚೀನಾದಿಂದ ಹರಡಲು ಆರಂಭಿಸಿದ ಕರೊನಾ ವೈರಸ್, ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ತಾಲಿಬಾನ್ ಭೇಟಿ, ಸಣ್ಣ ಆಫ್ರಿಕನ್ ದೇಶದೊಂದಿಗೆ ಚೀನಾ ಮಾಡಿಕೊಂಡ ನಿರಪದ್ರವಿಯಾದ ವ್ಯಾಪಾರ ಒಪ್ಪಂದ, ಟಿಬೇಟ್ ನೀರ್ಗಲ್ಲುಗಳ ಕರಗುವಿಕೆ... ಪ್ರಾರಂಭದಲ್ಲಿ ಒಂದಕ್ಕೊಂದು ಸಂಬಂಧವಿಲ್ಲ ಎನ್ನುವಂತಿದ್ದ ಈ ಘಟನಾವಳಿಗಳು ನಂತರದ ಹಂತದಲ್ಲಿ ವಿಶ್ವಕ್ಕೆ ಅಪಾಯಕಾರಿಯಾಗಿ ಪರಿಣಮಿಸಿದವು.

2021 ರಲ್ಲಿ ಸಂವಾದ ವರ್ಲ್ಡ್‌ನಲ್ಲಿ ಪ್ರಕಟವಾದ ಅತ್ಯುತ್ತಮ ಲೇಖನಗಳ ಸಂಕಲನವಾಗಿರುವ ಈ ಪುಸ್ತಕ, ನಮ್ಮ ಜೀವನದಲ್ಲಿ ಬದಲಾವಣೆಗಳನ್ನು ತರುವುದರ ಜೊತೆಗೆ ನಾವು ವಾಸಿಸುವ ಪ್ರಪಂಚದ ಮೇಲೆ ಪ್ರಭಾವ ಬೀರಿದ ಅತ್ಯಂತ ಮುಖ್ಯವಾದ ಅಂತಾರಾಷ್ಟ್ರೀಯ ಘಟನೆಗಳು ಮತ್ತು ಸಮಸ್ಯೆಗಳನ್ನು ವಿಶ್ಲೇಷಿಸುತ್ತದೆ. ನವ ಜಾಗತಿಕ ವ್ಯವಸ್ಥೆ–ದೃಷ್ಟಿಕೋನಗಳು–ಆಖ್ಯಾನಗಳು ಪುಸ್ತಕವನ್ನು ಸಂವಾದ ವರ್ಲ್ಡ್‌ನ ಸಂಪಾದಕರಾದ ಪ್ರಶಾಂತ್ ವೈದ್ಯರಾಜ್‌ರವರು ಸಂಪಾದಿಸಿದ್ದಾರೆ.

ಪುಸ್ತಕ ಖರೀದಿಗಾಗಿ: ayodhyabooks.com

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ನಾಗರೇಖಾ ಜೆ.ಆರ್.




ಭಾರತದ ರಾಷ್ಟ್ರೀಯ ಕೋವಿಡ್ ಲಸಿಕಾ ಅಭಿಯಾನವು ಒಂದು ವರ್ಷವನ್ನು ಪೂರೈಸಿರುವ ಹಿನ್ನೆಲೆಯಲ್ಲಿ  ಅದನ್ನು ಆಚರಿಸಲು ಕೇಂದ್ರ ಸರಕಾರವು ಸರಳವಾಗಿ ಮತ್ತು ವಿಶಿಷ್ಟವಾಗಿ ಆಚರಿಸಲು ನಿರ್ಧರಿಸಿತ್ತು.ಹೀಗಾಗಿ ಈ ಸಂದರ್ಭದಲ್ಲಿ ಭಾರತ ಸರಕಾರವು ಕೋವಿಡ್ ಲಸಿಕೆಯ ವರ್ಷಾಚರಣೆಯ ಸವಿನೆನಪಿಗಾಗಿ ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದ್ದು, ಈ ಅಂಚೆ ಚೀಟಿಯನ್ನು ಎಲ್ಲ ಆರೋಗ್ಯ ಕಾರ್ಯಕರ್ತರ ಶ್ರಮಕ್ಕೆ, ಅವರ ಕೆಲಸಗಳಿಗೆ ಗೌರವ ಸಮರ್ಪಿಸಲು ಬಿಡುಗಡೆ ಮಾಡಲಾಗಿದೆ ಎಂದು ಸಚಿವರಾದ ಡಾ.ಮನ್ಸುಖ್ ಮಾಂಡವೀಯ ತಿಳಿಸಿದ್ದಾರೆ.

ಹೆಲ್ತ್ ರಿಸರ್ಚ್ ಡಿಪಾರ್ಟ್ಮೆಂಟ್ ಹಾಗು ಐಸಿಎಂಆರ್‌ನ ಸಹಯೋಗದಲ್ಲಿ ಬಿಡುಗಡೆ ಮಾಡಿರುವ ಈ ಅಂಚೆ ಚೀಟಿಯಲ್ಲಿ ಆರೋಗ್ಯ ಕಾರ್ಯಕರ್ತರೊಬ್ಬರು ಮಾಸ್ಕ್ ಧರಿಸಿರುವ ಮಹಿಳೆಯೊಬ್ಬರಿಗೆ ಲಸಿಕೆ ನೀಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದ್ದು ಹಿನ್ನೆಲೆಯಲ್ಲಿ ಕೊರೋನಾ ವೈರಾಣುವಿನ ಕಾಲ್ಪನಿಕ ಚಿತ್ರವನ್ನು ನೀಡಲಾಗಿದೆ.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಧರ್ಮಾಧಿಕಾರಿ ಡಾ॥ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಹೇಮಾವತಿ ಹೆಗ್ಗಡೆಯವರ ಆಶಯದಂತೆ ಮಕರ ಸಂಕ್ರಾಂತಿಯ ಪುಣ್ಯ ದಿನದಂದು “ನಮ್ಮ ಊರು – ನಮ್ಮ ಶ್ರದ್ಧಾಕೇಂದ್ರ” ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಡಿ ರಾಜ್ಯದ 9,201ಕ್ಕೂ ಹೆಚ್ಚು ಧಾರ್ಮಿಕ ಶ್ರದ್ಧಾಕೇಂದ್ರಗಳನ್ನು ಒಂದೇ ದಿನ, ಏಕಕಾಲದಲ್ಲಿ ಸ್ವಚ್ಛ ಮಾಡುವ ಸಂಕಲ್ಪವನ್ನು ಮಾಡಿತ್ತು. ಇದೇ ರೀತಿಯಾಗಿ ರಾಜ್ಯದ ವಿವಿಧ ಮಠ, ಮಂದಿರ, ಮಸೀದಿ, ಚರ್ಚುಗಳನ್ನೂ ಸೇರಿದಂತೆ ಧಾರ್ಮಿಕ ಶ್ರದ್ಧಾ ಕೇಂದ್ರಗಳನ್ನು ಸ್ವಚ್ಛ ಮಾಡುವ ಮಹಾ ಅಭಿಯಾನವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಯಶಸ್ವಿಗೊಳಿಸಿದೆ.

ಗ್ರಾಮೀಣ ಭಾಗದ ಜನರಿಗೆ ಅತ್ಯುತ್ತಮ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸುವ ಸಲುವಾಗಿ ಕೇಂದ್ರ ಸರಕಾರವು ಆರಂಭಿಸಿರುವ ಇ–ಸಂಜೀವಿನಿ ಟೆಲಿಕಾಂ ಸೇವೆಯನ್ನು ಅತ್ಯಧಿಕ ಸಂಖ್ಯೆಯಲ್ಲಿ ಸದುಪಯೋಗ ಮಾಡಿಕೊಂಡ ರಾಜ್ಯಗಳ ಪೈಕಿ ಕರ್ನಾಟಕ ಮುಂಚೂಣಿಯಲ್ಲಿದೆ.ವರದಿಗಳ ಪ್ರಕಾರ, ಇ– ಸಂಜೀವಿನಿ ಟೆಲಿಕಾಂ ಸೇವೆಯಲ್ಲಿ ದೇಶದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಒಪಿಡಿ ಸೇವೆ ಪಡೆದಿರುವ ಪಟ್ಟಿಯಲ್ಲಿ ಕರ್ನಾಟಕ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ.

# ಸಾಲುದ್ದದ ಸುದ್ದಿಗಳು

eSanjeevaniOPD
STAY HOME OPD




ಇ–ಸಂಜೀವಿನಿ ಟೆಲಿಮೆಡಿಸಿನ್ ಬಳಕೆಯಲ್ಲಿ ದೇಶದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಆದರೆ ಒಪಿಡಿ ಸೇವೆ ಬಳಕೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದೆ. ಕರ್ನಾಟಕದಲ್ಲಿ ಇದುವರೆಗೆ 35 ಲಕ್ಷ ಮಂದಿ ಟೆಲಿಮೆಡಿಸಿನ್ ಸೇವೆಯನ್ನು ಪಡೆದುಕೊಂಡಿದ್ದಾರೆ. ಅದರಲ್ಲಿ 16.40 ಲಕ್ಷ ಮಂದಿ ಹೆಲ್ತ್‌ವೆಲ್‌ನೆಸ್ ಸೆಂಟರ್ ಹಾಗೂ 18.69 ಲಕ್ಷ ಮಂದಿ ಒಪಿಡಿ ಸೇವೆಯನ್ನು ಪಡೆದುಕೊಂಡಿದ್ದಾರೆ. ಈ ಸಂಜೀವಿನಿ ಮುಖಾಂತರ ವೈದ್ಯರು ರೋಗಿಯ ಆರೋಗ್ಯ ಸಮಸ್ಯೆಗಳನ್ನು ಆಲಿಸಿ ಸೂಕ್ತ ಚಿಕಿತ್ಸೆಯನ್ನು ಸೂಚಿಸುತ್ತಾರೆ.

ತಮ್ಮ ಪೋಷಕರು ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಂಡ ಸುಮಾರು 50 ವರ್ಷಗಳ ನಂತರ ಯಾದಗಿರಿ ಜಿಲ್ಲೆಯ 55 ವರ್ಷದ ಕಾರ್ಮಿಕರೊಬ್ಬರು ತಮ್ಮ ಪತ್ನಿ ಮತ್ತು ಮೂವರು ಮಕ್ಕಳೊಂದಿಗೆ ಹಿಂದೂ ಧರ್ಮಕ್ಕೆ ಮರಳಲು ನಿರ್ಧರಿಸಿದ್ದಾರೆ.

ಕಲ್ಬುರ್ಗಿ ಜಿಲ್ಲೆಯ ಗುರ್ಮಿಟ್ಕಲ್ ತಾಲೂಕಿನ ಕಣಿಕಲ್ ಗ್ರಾಮದಲ್ಲಿ ವಾಸವಾಗಿರುವ ತಿಮೋತಿ ಹೊಸಮನಿ ಅವರು ಚಿಕ್ಕವರಾಗಿದ್ದಾಗಲೇ ಅವರ ಹೆತ್ತವರಾದ ಜ್ಞಾನಮಿತ್ರ ಮತ್ತು ಸೌಭಾಗ್ಯ ಕ್ರಿಶ್ಚಿಯನ್ ಮತವನ್ನು ಸ್ವೀಕರಿಸಿದ್ದರು. ಆದರೀಗ ಅವರು ಹಿಂದೂ ಧರ್ಮ ಸ್ವೀಕರಿಸಲು ಮುಂದಾಗಿದ್ದಾರೆ. “ಯಾಕಾಗಿ, ಯಾವ ಸಂದರ್ಭದಲ್ಲಿ ನನ್ನ ಹೆತ್ತವರು ಕ್ರಿಶ್ಚಿಯನ್ ಮತ ಸ್ವೀಕಾರ ಮಾಡಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ಆದರೆ ಈಗ, ನಾವು ನಮ್ಮ ಮೂಲ ಧರ್ಮಕ್ಕೆ ಮರಳಲು ತಯಾರಿ ನಡೆಸುತ್ತಿದ್ದೇವೆ” ಎಂದು ಅವರು ಹೇಳಿದ್ದಾರೆ.

ಹೊಸಮನಿ ಅವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅವರ ಕುಟುಂಬದಲ್ಲಿ ಪತ್ನಿ ಶಾರದಮ್ಮ,  ಮಕ್ಕಳಾದ ಅಭಿಷೇಕ್, ಜ್ಞಾನಮಿತ್ರ ಮತ್ತು ನೀಲ್ ಆರ್ಮ್‌ಸ್ಟ್ರಾಂಗ್ ಕೆಲವು ವರ್ಷಗಳಿಂದ ಹಿಂದೂ ಆಚರಣೆಗಳು ಮತ್ತು ಹಬ್ಬಗಳನ್ನು ಆಚರಿಸುತ್ತಿದ್ದಾರೆ. ಇವರ ಹಿರಿಯ ಮಗ ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದು, ಇನ್ನಿಬ್ಬರು ವ್ಯಾಸಂಗ ನಡೆಸುತ್ತಿದ್ದಾರೆ.

ರಾಷ್ಟ್ರರಾಜಧಾನಿ ದೆಹಲಿಯಲ್ಲಿ ಹೊಸದಾಗಿ ನಿರ್ಮಾಣ ಮಾಡಲಾಗುತ್ತಿರುವ ಬೃಹತ್ ಸಂಸತ್ ಕಟ್ಟಡ ಸೆಂಟ್ರಲ್ ವಿಸ್ಟಾದ ಸಂಕೀರ್ಣದ ಕಟ್ಟಡವೊಂದು ಅನುಭವ ಮಂಟಪ ಎಂಬ ಹೆಸರನ್ನು ಪಡೆಯುವ ನಿರೀಕ್ಷೆಯಿದೆ. ಮೂಲಗಳ ಪ್ರಕಾರ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಈ ಬಗ್ಗೆ ರಾಷ್ಟ್ರಪತಿಯವರಿಗೆ ಮನವಿ ಮಾಡಿದ್ದು, ಇದಕ್ಕೆ ರಾಷ್ಟ್ರಪತಿಯವರು ಸಕಾರಾತ್ಮಕವಾದ ರೀತಿಯಲ್ಲಿ ಪ್ರತಿಕ್ರಿಯೆಯನ್ನು ನೀಡಿದ್ದಾರೆ.

12ನೇ ಶತಮಾನದಲ್ಲಿ ಶರಣರು ನಿರ್ಮಾಣ ಮಾಡಿದ ಅನುಭವ ಮಂಟಪ ಎಲ್ಲ ಜಾತಿ, ಜನಾಂಗ, ಸಮುದಾಯ ಮತ್ತು ಲಿಂಗಗಳಿಗೆ ಸಮಾನ ಪ್ರಾತಿನಿಧ್ಯವನ್ನು ನೀಡಿದೆ. ಈ ಮೂಲಕ ಪ್ರಜಾಪ್ರಭುತ್ವದ ಮೌಲ್ಯವನ್ನು ತಳಮಟ್ಟದಿಂದ ಗಟ್ಟಿಗೊಳಿಸಿದೆ. ಹೀಗಾಗಿ ಅನುಭವ ಮಂಟಪದ ಹೆಸರನ್ನು ಸಂಸತ್ತಿನ  ಕಟ್ಟಡವೊಂದಕ್ಕೆ ಇಡಬೇಕು ಎಂಬ



ಮನವಿಯನ್ನು ಬಸವರಾಜ ಹೊರಟ್ಟಿ ಅವರು ರಾಷ್ಟ್ರಪತಿಯವರಿಗೆ ಮಾಡಿದ್ದಾರೆ. ಇದಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದನೆ ನೀಡಿರುವ ರಾಷ್ಟ್ರಪತಿಗಳ ಕಚೇರಿ, ಕೇಂದ್ರ ಸರಕಾರದ ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ ಅನುಭವ ಮಂಟಪ ಹೆಸರಿಡುವ ಕುರಿತು ಸೂಕ್ತ ರೀತಿಯಲ್ಲಿ ಪರಿಶೀಲಿಸುವ ತಿಳಿಸಿದೆ.

ಕೋವಿಡ್–19 ಮತ್ತು ಇತರ ಕಾರಣಗಳಿಂದಾಗಿ ಏಪ್ರಿಲ್ 1, 2020 ರಿಂದ ಒಟ್ಟು 1,47,492 ಮಕ್ಕಳು ತಮ್ಮ ತಾಯಿ ಅಥವಾ ತಂದೆ ಅಥವಾ ಇಬ್ಬರನ್ನೂ ಕಳೆದುಕೊಂಡಿದ್ದಾರೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಸುಪ್ರೀಂಕೋರ್ಟ್ಗೆ ತಿಳಿಸಿದೆ.

ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ ಪೋಷಕರು ಸಾವಿಗೀಡಾದ ಹಿನ್ನೆಲೆಯಲ್ಲಿ ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಕುರಿತು ಸ್ವಯಂ ಪ್ರೇರಿತವಾಗಿ ವಿವರಗಳನ್ನು ನೀಡಿರುವ ಎನ್ಸಿಪಿಸಿಆರ್, ತನ್ನ ಅಂಕಿಅಂಶಗಳ ಪ್ರಕಾರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜನವರಿ 11 ರವರೆಗೆ ತನ್ನ ಬಾಲ್ ಸ್ವರಾಜ್ ಪೋರ್ಟಲ್–ಕೋವಿಡ್ ಕೇರ್‌ನಲ್ಲಿ ಅಪ್ಲೋಡ್ ಮಾಡಿದ ಡೇಟಾವನ್ನು ಆಧರಿಸಿದ್ದು, ‘ಬಾಲ್ ಸ್ವರಾಜ್ ಪೋರ್ಟಲ್–ಕೋವಿಡ್ ಕೇರ್’ನಲ್ಲಿ ಅಪ್ಲೋಡ್ ಮಾಡಿದ ಮಕ್ಕಳ ಡೇಟಾವು ಎರಡೂ ವರ್ಗದ ಮಕ್ಕಳನ್ನು ಒಳಗೊಂಡಿದೆ. ಇದರಲ್ಲಿ ಏಪ್ರಿಲ್ 2020 ರಿಂದ ಮಗು ಕೋವಿಡ್–19 ಗೆ ಪೋಷಕರಿಬ್ಬರನ್ನು ಅಥವಾ ಒಬ್ಬ ಪೋಷಕರನ್ನು ಕಳೆದುಕೊಂಡಿದೆ. ಇನ್ನೊಂದು  ರೋಗ ಅಥವಾ ಇನ್ನಾವುದೇ ರೀತಿಯಲ್ಲಿ ಮಗುವು ಪೋಷಕರನ್ನು ಕಳೆದುಕೊಂಡಿದೆ. ಜನವರಿ 11 ರವರೆಗೆ ಅಪ್ಲೋಡ್ ಮಾಡಲಾದ ಡೇಟಾವು ಅನಾಥ (10,094), ಪೋಷಕರನ್ನು ಕಳೆದುಕೊಂಡ (1,36,910) ಮತ್ತು ಪರಿತ್ಯಕ್ತ (488) ಸೇರಿದಂತೆ ಒಟ್ಟು 1,47,492 ಮಕ್ಕಳ ಸ್ಥಿತಿಯನ್ನು ತೋರಿಸಿದೆ ಎಂದು ಆಯೋಗ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತವು 650 ಶತಕೋಟಿ ಡಾಲರ್ ರಫ್ತು ಗುರಿ ಸಾಧಿಸಬಹುದಾಗಿದೆ ಎನ್ನಲಾಗಿದೆ. ಎಲ್ಲಾ ಪ್ರಮುಖ ರಫ್ತು ಉತ್ತೇಜನಾ ಮಂಡಳಿಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವರಾದ ಪಿಯೂಶ್ ಗೋಯಲ್ ಅವರು ಮಾತನಾಡುತ್ತಾ ಭಾರತವು ಈ ಸಾಲಿನಲ್ಲಿ 400 ಬಿಲಿಯನ್ ಡಾಲರ್‌ನಷ್ಟು ಸರಕು ರಫ್ತು ಮಾಡುವ ಗುರಿಯನ್ನು ಇರಿಸಿಕೊಂಡಿದೆ ಎಂದರು. ಅಲ್ಲದೆ ಸೇವಾ ವಲಯವು ಸುಮಾರು 250 ಬಿಲಿಯನ್ ಡಾಲರ್ ಅಷ್ಟು ಮೌಲ್ಯದ ರಫ್ತು ಮಾಡಲು ಶ್ರಮಿಸುತ್ತಿದೆ ಎಂದು ಕೇಂದ್ರ ವಾಣಿಜ್ಯ ಸಚಿವರು ತಿಳಿಸಿದ್ದಾರೆ.



## ಆತ್ಮನಿರ್ಭರ ರಕ್ಷಣಾ ವಲಯ: ಸೇನೆಯ ಮೊದಲ ಒಪ್ಪಂದ

ರಕ್ಷಣಾ ವಲಯದಲ್ಲಿ ಆತ್ಮನಿರ್ಭರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಮುಂದಿರಿಸಲಾಗಿದೆ, ಮಂಗಳವಾರ ಭಾರತೀಯ ಸೇನೆಯು ಅನಡ್ರೋನ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ 96 ಕೋಟಿ ರೂಪಾಯಿ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

ಮ್ಯಾನ್ಯುವರೆಬಲ್ ಎಕ್ಸ್ಪಾಂಡೇಬಲ್ ಏರಿಯಲ್ ಟಾರ್ಗೆಟ್‌ಗಾಗಿನ ಮೇಕ್–II ಅಡಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಬಗ್ಗೆ ಡಿಫೆನ್ಸ್ ಪ್ರೊಡಕ್ಷನ್ ಇಂಡಿಯಾ ಅಧಿಕೃತವಾಗಿ ಟ್ವೀಟ್ ಮಾಡಿ ಮಾಹಿತಿ ನೀಡಿದ್ದು, “ಆತ್ಮನಿರ್ಭರ ರಕ್ಷಣೆಯತ್ತ ಮಹತ್ವದ ಹೆಜ್ಜೆ. ಮೇಕ್–II ಪ್ರಾಜೆಕ್ಟ್‌ನ ಮೊದಲ ಯಶಸ್ಸಿನ ಕಥೆ. ಭಾರತೀಯ ಸೇನೆಯು ವಾಯು ರಕ್ಷಣೆ ಮತ್ತು ಭಾರತೀಯ ವಾಯುಸೇನೆಗಾಗಿ ಮ್ಯಾನ್ಯುವರೆಬಲ್ ಎಕ್ಸ್ಪಾಂಡೇಬಲ್ ಏರಿಯಲ್ ಟಾರ್ಗೆಟ್‌ಗಾಗಿ 96 ಕೋಟಿ ರೂಪಾಯಿ ಮೌಲ್ಯದ ಎಂ/ಎಸ್ ಅನಡ್ರೋನ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

Date of Publication 25th JANUARY 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-02-2022

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## 5 ಕೋಟಿ ಗ್ರಾಹಕರನ್ನು ಪಡೆದ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್

ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿದ ಕೇವಲ ಕೆಲವೇ ವರ್ಷಗಳಲ್ಲಿ ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ಡಿಜಿಟಲ್ ಪಾವತಿ ಬ್ಯಾಂಕ್‌ಗಳಲ್ಲಿ ಒಂದಾಗಿದೆ. ಈ ಸಾಧನೆಯ ಬಗ್ಗೆ ಪ್ರಕಟಿಸಿದ ಬ್ಯಾಂಕ್, ತನ್ನ 1 ಲಕ್ಷ 36 ಸಾವಿರ ಅಂಚೆ ಕಚೇರಿಗಳ ಮೂಲಕ ಈ ಐದು ಕೋಟಿ ಖಾತೆಗಳನ್ನು ಡಿಜಿಟಲ್ ಮತ್ತು ಪೇಪರ್‌ನೆಸ್ ಮೋಡ್‌ನಲ್ಲಿ ತೆರೆಯಲಾಗಿದೆ ಎಂದು ಹೇಳಿದೆ.

ಈ ಪೈಕಿ 1 ಲಕ್ಷ 20 ಸಾವಿರ ಅಂಚೆ ಕಚೇರಿಗಳು ಗ್ರಾಮೀಣ ಪ್ರದೇಶದಲ್ಲಿವೆ. ಸುಮಾರು 1 ಲಕ್ಷ 47 ಸಾವಿರ ಮನೆಬಾಗಿಲಿನ ಬ್ಯಾಂಕಿಂಗ್ ಸೇವಾ ಪೂರೈಕೆದಾರರು ಈ ಖಾತೆಗಳನ್ನು ತೆರೆಯಲು ಸಹಾಯ ಮಾಡಿದ್ದಾರೆ. ಇದರೊಂದಿಗೆ, ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ 2 ಲಕ್ಷದ 80 ಸಾವಿರ ಪೋಸ್ಟ್ ಆಫೀಸ್ ಉದ್ಯೋಗಿಗಳ ಬಲವನ್ನು ಹೆಚ್ಚಿಸುವ ಮೂಲಕ ಆರ್ಥಿಕವಾಗಿ ಅರಿವು ಮತ್ತು ಸಶಕ್ತ ಗ್ರಾಹಕರ ನೆಲೆಯನ್ನು ನಿರ್ಮಿಸುವ ಮೂಲಕ ವಿಶ್ವದ ಅತಿದೊಡ್ಡ ಡಿಜಿಟಲ್ ಆರ್ಥಿಕ ಸಾಕ್ಷರತಾ ಕಾರ್ಯಕ್ರಮವನ್ನು ಸಾಧಿಸಿದೆ.

ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ 13 ಭಾಷೆಗಳಲ್ಲಿ NPCI, RBI ಮತ್ತು UIDAI ಸೇವೆಗಳನ್ನು ಒದಗಿಸುವ ಇಂಟರ್ ಆಪರೇಬಲ್ ಪಾವತಿಗಳು ಮತ್ತು ಸೆಟ್ಲ್‌ಮೆಂಟ್ ಸಿಸ್ಟಮ್‌ಗಳ ಮೂಲಕ ಡಿಜಿಟಲ್ ಬ್ಯಾಂಕಿಂಗ್ ಅನ್ನು ತಳ ಮಟ್ಟಕ್ಕೆ ಕೊಂಡೊಯ್ದಿದೆ ಎಂದು ಹೇಳಿದೆ. ಒಟ್ಟು ಖಾತೆದಾರರಲ್ಲಿ ಸುಮಾರು 48 ಪ್ರತಿಶತದಷ್ಟು ಮಹಿಳಾ ಖಾತೆದಾರರು ಇದ್ದು, ಮಹಿಳಾ ಗ್ರಾಹಕರನ್ನು ಬ್ಯಾಂಕಿಂಗ್ ನೆಟ್ವರ್ಕ್ ಅಡಿಯಲ್ಲಿ ತರಲು ಬ್ಯಾಂಕಿನವರು ಕಾರ್ಯ ನಿರ್ವಹಿಸಿದ್ದಾರೆ.



## ಡಾವೋಸ್ ಶೃಂಗಸಭೆಯಲ್ಲಿ ಮೋದಿ

ವರ್ಲ್ಡ್ ಎಕನಾಮಿಕ್ ಫೋರಂನ ಡಾವೋಸ್ ಶೃಂಗಸಭೆಯಲ್ಲಿ ವರ್ಚುವಲ್ ಆಗಿ ಭಾಷಣ ಮಾಡಿದ ಮೋದಿ, ಭಾರತವು ಹೆಚ್ಚಿನ ಶಕ್ತಿ ಮತ್ತು ಸ್ಫೂರ್ತಿಯಿಂದ ಮುನ್ನುಗ್ಗುತ್ತಿದೆ. ಭಾರತವು ತನ್ನ 75 ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ವರ್ಷವನ್ನು ಆಚರಿಸುತ್ತಿದೆ ಮತ್ತು ದೇಶದಲ್ಲಿ 160 ಕೋಟಿ ಲಸಿಕೆ ಡೋಸ್‌ಗಳನ್ನು ವಿತರಣೆ ಮಾಡುವ ಮೂಲಕ ದೊಡ್ಡ ಸವಾಲಿನ ಕಾರ್ಯವನ್ನು ಪೂರ್ಣಗೊಳಿಸಿದೆ ಎಂದರು.

ಈ ಕೊರೋನಾ ಕಾಲಘಟ್ಟದಲ್ಲಿ ಭಾರತವು ತನ್ನ 80 ಕೋಟಿಗೂ ಹೆಚ್ಚು ನಾಗರಿಕರಿಗೆ ಉಚಿತ ಆಹಾರ ಸಾಮಗ್ರಿಯನ್ನು ನೀಡುವ ಮೂಲಕ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ ಎಂದು ಪ್ರಧಾನಮಂತ್ರಿ ಹೇಳಿದರು. ಭಾರತವು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದ್ದು, ಸುಧಾರಣೆಗಳತ್ತ ಗಮನ ಹರಿಸಿದೆ. ಜಾಗತಿಕ ಆರ್ಥಿಕ ತಜ್ಞರು ಭಾರತದ ನಿರ್ಧಾರಗಳನ್ನು ಮೆಚ್ಚುಗೆ ಸೂಚಿಸಿದ್ದಾರೆ. ಕೊರೋನಾ ಸಾಂಕ್ರಾಮಿಕದ ಈ ಸಮಯದಲ್ಲಿ, ಭಾರತವು ಅನೇಕ ದೇಶಗಳಿಗೆ ಅಗತ್ಯ ಔಷಧಿಗಳು, ಲಸಿಕೆಗಳನ್ನು ನೀಡುವ ಮುಖಾಂತರ ಕೋಟಿಗಟ್ಟಲೆ ಜೀವಗಳನ್ನು ಉಳಿಸಿದೆ ಎಂದಿದ್ದಾರೆ.

ಇಂದು ಭಾರತವು ವಿಶ್ವದ ಮೂರನೇ ಅತಿದೊಡ್ಡ ಫಾರ್ಮಾ ಉತ್ಪಾದಕ ಮತ್ತು ವಿಶ್ವದಲ್ಲಿ ಔಷಧ ಕ್ಷೇತ್ರದಲ್ಲಿ ಮುನ್ನಡೆಯುತ್ತಿದೆ. ಭಾರತದಂತಹ ಬಲಿಷ್ಠ ಪ್ರಜಾಪ್ರಭುತ್ವ ಇಡೀ ಜಗತ್ತಿಗೇ ಭರವಸೆ ನೀಡಿದ್ದು, ಈ ಭರವಸೆಯು ಪ್ರಜಾಪ್ರಭುತ್ವದ ಬಗೆಗಿನ ವಿಶ್ವಾಸವಾಗಿದೆ. 21ನೇ ಶತಮಾನವನ್ನು ಸಶಕ್ತಗೊಳಿಸುತ್ತಿರುವ ತಂತ್ರಜ್ಞಾನ, ಭಾರತೀಯರ ಪ್ರತಿಭೆ ಮತ್ತು ಭಾರತೀಯರ ಮನೋಧರ್ಮವು ಇವೆಲ್ಲವುಗಳ ಮಿಳಿತವಾಗಿದೆ ಎಂದು ಪ್ರಧಾನಿ ಹೇಳಿದರು.

ಇಂದು ಭಾರತವು ವಿಶ್ವದ ಅತಿದೊಡ್ಡ, ಸುರಕ್ಷಿತ ಮತ್ತು ಯಶಸ್ವಿ ಡಿಜಿಟಲ್ ಹಣ ಪಾವತಿಯ ವೇದಿಕೆ ರೂಪೇಯನ್ನು ಹೊಂದಿದೆ. ಕಳೆದ ತಿಂಗಳು ಬರೋಬ್ಬರಿ 4.4 ಶತಕೋಟಿ ವ್ಯವಹಾರಗಳು ಭಾರತದಲ್ಲಿ ಏಕೀಕೃತ ಪಾವತಿಗಳ ಇಂಟರ್‌ಫೇಸ್ ಮೂಲಕ ನಡೆದಿವೆ ಎಂದು ಮೋದಿ ಹೇಳಿದರು. ಅಲ್ಲದೆ, ಭಾರತ ವಿಶ್ವಕ್ಕೆ ದಾಖಲೆಯ ಸಾಫ್ಟ್‌ವೇರ್ ಎಂಜಿನಿಯರ್‌ಗಳನ್ನು ಕಳುಹಿಸುತ್ತಿದೆ ಮತ್ತು 50 ಲಕ್ಷಕ್ಕೂ ಹೆಚ್ಚು ಸಾಫ್ಟ್‌ವೇರ್ ಡೆವಲಪರ್‌ಗಳು ಭಾರತದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂದು ಭಾರತವು ವಿಶ್ವದಲ್ಲೇ ಮೂರನೇ ಅತಿದೊಡ್ಡ ಯುನಿಕಾರ್ನ್‌ಗಳನ್ನು ಹೊಂದಿದೆ ಮತ್ತು ಕಳೆದ 6 ತಿಂಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳನ್ನು ನೋಂದಾಯಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

## ಗಣರಾಜ್ಯೋತ್ಸವ ಸಮಾರಂಭದಲ್ಲಿ 1000 ಡ್ರೋನ್‌ಗಳ ಪ್ರದರ್ಶನ!

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ ದೆಹಲಿ) ನೇತೃತ್ವದ ಸ್ಟಾರ್ಟ್‌ಅಪ್‌ನ್ನು ಉತ್ತೇಜಿಸುವ ಸಲುವಾಗಿ ಇದೇ ಮೊದಲ ಬಾರಿಗೆ ಗಣರಾಜ್ಯೋತ್ಸವದ ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮದಲ್ಲಿ ಡ್ರೋನ್ ಪ್ರದರ್ಶನವನ್ನು ಏರ್ಪಡಿಸಲಾಗುತ್ತಿದೆ. ಅಲ್ಲಿ ಸುಮಾರು 1000 ಡ್ರೋನ್ ಗಳು ಪ್ರದರ್ಶನ ನೀಡಲಿವೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ. ಚೀನಾ, ರಷ್ಯಾ, ಯುಕೆಯ ಬಳಿಕ ಭಾರತ ಡ್ರೋನ್ ಪ್ರದರ್ಶನ ನೀಡುತ್ತಿರುವ ನಾಲ್ಕನೇ ದೇಶ.

ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಸಲುವಾಗಿ ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮ ಪ್ರೊಜೆಕ್ಷನ್ ಮ್ಯಾಪಿಂಗ್‌ಗೆ ಸಾಕ್ಷಿಯಾಗಲಿದೆ. ಐಐಟಿ ದೆಹಲಿಯ ಸ್ಟಾರ್ಟ್‌ಅಪ್ ಇನ್ಕ್ಯುಬೇಷನ್ ಬೋಟ್ಲ್ಯಾಬ್ ಡೈನಾಮಿಕ್ಸ್ ಡ್ರೋನ್ ಪ್ರದರ್ಶನವನ್ನು ಏರ್ಪಡಿಸಲಿದ್ದು, ಈ ಎಲ್ಲಾ ಡ್ರೋನ್‌ಗಳು ದೇಶಿಯವಾಗಿ ಅಭಿವೃದ್ಧಿಗೊಂಡಿದೆ ಮತ್ತು ವಿನ್ಯಾಸಗೊಂಡಿವೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ.

ಜನವರಿ 29ರಂದು ಗಣರಾಜ್ಯೋತ್ಸವ ಆಚರಣೆಯ ಕೊನೆಯ ದಿನ ವಿಜಯ ಚೌಕ್‌ನಲ್ಲಿ ಬೀಟಿಂಗ್ ರಿಟ್ರೀಟ್ ಸಮಾರಂಭ ನಡೆಯಲಿದೆ. ಮೂರು ಸೇನಾಪಡೆಗಳ ಬ್ಯಾಂಡ್‌ಗಳು ಇಲ್ಲಿ ಪ್ರದರ್ಶನ ನೀಡುತ್ತವೆ.



## ಹೊಸ ಕಟ್ಟಡಕ್ಕೆ ಭಾರತೀಯ ವಿದ್ವಾಂಸನ ಹೆಸರಿಟ್ಟ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ!!



ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಬಲ್ಲಿಯೋಲ್ ಕಾಲೇಜಿನ ಹೊಸ ಕಟ್ಟಡಕ್ಕೆ ಭಾರತೀಯ ವಿದ್ವಾಂಸ ಡಾ ಲಕ್ಷ್ಮಣ್ ಸರೂಪ್ ಅವರ ಹೆಸರನ್ನು ಇಡುವುದಾಗಿ ಘೋಷಿಸಿದ್ದು, ಇದು ಭಾರತೀಯರಿಗೆ ಹೆಮ್ಮೆಯ C1 ವಿಷಯವಾಗಿದೆ. ವಿಶ್ವವಿದ್ಯಾನಿಲಯವು ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, ಸರೂಪ್ (1894–1946) ಆಕ್ಸ್‌ಫರ್ಡ್ನಲ್ಲಿ DPhil ಪದವಿಗಾಗಿ ಅರ್ಜಿ ಸಲ್ಲಿಸಿದ ಮೊದಲ ವಿದ್ಯಾರ್ಥಿ. 1919ರಲ್ಲಿ ಅವರಿಗೆ ಯೆತಿಮೋಲಾಜಿ ಮೇಲಿನ ಅತ್ಯಂತ ಹಳೆಯ ಸಂಸ್ಕೃತ ಗ್ರಂಥವಾದ ಯಾಸ್ಕನ ನಿರುಕ್ತದ ವಿಷಯದ ಮೇಲೆ ಪದವಿಯನ್ನು ನೀಡಲಾಯಿತು.

"ಮಾಸ್ಟರ್ಸ್ ಫೀಲ್ಡ್‌ನಲ್ಲಿರುವ ಬಲ್ಲಿಯೋಲ್‌ನ ಹೊಸ ಕಟ್ಟಡಗಳಿಗೆ ಬಲ್ಲಿಯೋಲ್ ಹಳೆಯ ವಿದ್ಯಾರ್ಥಿ ಮತ್ತು ವೈವಿಧ್ಯತೆ, ಮೌಲ್ಯಗಳನ್ನು ಪ್ರತಿಬಿಂಬಿಸುವ ಶಿಕ್ಷಣತಜ್ಞರ ಹೆಸರನ್ನು ಇಡಲಾಗಿದೆ. ಕಾಲೇಜಿನ ಇತಿಹಾಸ, ಬ್ಲಾಕ್‌ಗೆ ಡಾ. ಲಕ್ಷ್ಮಣ್ ಸರೂಪ್ (ಬಲ್ಲಿಯೋಲ್ 1916) ಅವರ ಹೆಸರನ್ನು ಇಡಲಾಗಿದೆ" ಎಂದು ಬಲ್ಲಿಯೋಲ್ ಕಾಲೇಜಿನ ಹೇಳಿಕೆ ತಿಳಿಸಿದೆ. "ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು 1917 ರಲ್ಲಿ ಬ್ರಿಟನ್‌ನ್ನಲ್ಲಿ DPhil ಅನ್ನು ಮೊದಲ ಡಾಕ್ಟರೇಟ್ ಪದವಿಯಾಗಿ ಪರಿಚಯಿಸಿತು, ಜರ್ಮನಿಯಲ್ಲಿ ಪರಿಚಯಿಸಲಾದ ಸಂಶೋಧನಾ ಪದವಿಗಳಿಂದ ಇದು ಸ್ಫೂರ್ತಿ ಪಡೆದಿತ್ತು. ಆಕ್ಸ್‌ಫರ್ಡ್ ಪದವಿಗೆ ಮೊದಲು ದಾಖಲಾದ ಇಬ್ಬರು ವಿದ್ಯಾರ್ಥಿಗಳಲ್ಲಿ ಲಕ್ಷ್ಮಣ್ ಸರೂಪ್ ಒಬ್ಬರು, ಇನ್ನೊಬ್ಬರು ನ್ಯೂಜಿಲೆಂಡ್‌ನ ಜೇಮ್ಸ್ ಗ್ಯಾಟೆನ್ಬೈ" ಎಂದು ಹೇಳಿದೆ.

ವಿಶ್ವವಿದ್ಯಾನಿಲಯದ ಮಾಹಿತಿಯ ಪ್ರಕಾರ, ಸರೂಪ್ 1894 ರಲ್ಲಿ ಲಾಹೋರ್‌ನಲ್ಲಿ (ಮೊದಲು ಭಾರತದ ಒಂದು ಭಾಗ, ಈಗ ಪಾಕಿಸ್ತಾನದಲ್ಲಿದೆ) ಜನಿಸಿದರು. ಅವರು ಲಾಹೋರಿನ ಓರಿಯೆಂಟಲ್ ಕಾಲೇಜಿನಲ್ಲಿ ಸಂಸ್ಕೃತದಲ್ಲಿ ಎಂಎ ಮುಗಿಸಿದ ನಂತರ 1916 ರಲ್ಲಿ ಭಾರತೀಯ ರಾಜ್ಯ ವಿದ್ಯಾರ್ಥಿವೇತನದ ಮೇಲೆ ಬಲ್ಲಿಯೋಲ್ ಕಾಲೇಜಿಗೆ ಸೇರಿದರು. ಬಲ್ಲಿಯೋಲ್‌ನಲ್ಲಿದ್ದಾಗ, ಸರೂಪ್ ವಿಶ್ವವಿದ್ಯಾಲಯದ ಕ್ರಿಕೆಟ್ ತಂಡದ ನಾಯಕರಾಗಿದ್ದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.